1596

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
"ಸಾರಿಗೆ ಭವನ" ಕೇಂದ್ರ ಕಛೇರಿ,
ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560 027. ಭಾರತ
ದೂರವಾಣಿ : 080-22221321 / 22221325
ವೆಬ್-ಸೈಟ್ : www.ksrtc.in

**Karnataka State Road Transport Corporation**
"Transport House" Central Offices,
K.H.Road, Shanthinagar, Bangalore-560 027. India
Tel : 080-22221321 / 25
Website : www.ksrtc.in

ಸಂ.ಕರಾಸ:ಕೇಕ:ಆಡಳತ:ಸೇನಿ:308:62:16-17

ದಿನಾಂಕ: 01-06-2016

# ಸುತ್ತೋಲೆ ಸಂಖ್ಯೆ: 1590

ವಿಷಯ: ಸುತ್ತೋಲೆ ಸಂಖ್ಯೆ: 1192 ದಿನಾಂಕ:31-03-1999ರ ವೇತನ ಹಾಗೂ ಭತ್ಯೆರಹಿತ ಅಸಾಧಾರಣ ರಜೆ ಬಗ್ಗೆ ಹೊರಡಿಸಿದ ಸುತ್ತೋಲೆಯನ್ನು ಹಿಂಪಡೆಯುವ ಕುರಿತು.

ಉಲ್ಲೇಖ: 1. ಸುತ್ತೋಲೆ ಸಂಖ್ಯೆ: 1192 ದಿನಾಂಕ: 31-03-1999
2. ಠರಾವು ಸಂಖ್ಯೆ 9798 ದಿನಾಂಕ: 12-04-2016.

---

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉದ್ಯಮ ಸ್ಥಾಪಿಸಲು/ಹೆಚ್ಚಿನ ವಿದ್ಯಾಭ್ಯಾಸ ಮಾಡಲು/ಉನ್ನತ ಹುದ್ದೆ ಪಡೆಯಲು/ವಿದೇಶಕ್ಕೆ ಹೋಗಲು ಬಯಸುವ ನೌಕರರಿಗೆ ಉಲ್ಲೇಖ-1ರನ್ವಯ ವೇತನ ಹಾಗೂ ಭತ್ಯೆರಹಿತ ಅಸಾಧಾರಣ ರಜೆ ಪಡೆಯಲು ಅವಕಾಶ ಕಲ್ಪಿಸಲಾಗಿತ್ತು. ಆದರೆ, ವೇತನ ಹಾಗೂ ಭತ್ಯೆರಹಿತ ಅಸಾಧಾರಣ ರಜೆ ಪಡೆದ ನೌಕರರು ಮರಳದೇ ಇರುವುದರಿಂದ ನಿಗಮದಲ್ಲಿ ನೌಕರರ ಅಲಭ್ಯತೆಯಿಂದ ಸಿಬ್ಬಂದಿಯ ಕೊರತೆಯಾಗಿ ನಿಗಮದ ಕಾರ್ಯಾಚರಣೆಗೆ ತೊಂದರೆಯಾಗುತ್ತಿರುವುದನ್ನು ಗಮನಿಸಲಾಗಿದೆ. ಅಲ್ಲದೇ, ಸದರಿ ರಜೆ ಸೌಲಭ್ಯಗಳನ್ನು ಹೆಚ್ಚಿನ ಸಿಬ್ಬಂದಿಗಳು ಪಡೆಯುತ್ತಿಲ್ಲದಿರುವುದು ಸಹ ಕಂಡು ಬಂದಿರುತ್ತದೆ.

ಪ್ರಸ್ತುತ ನೇರ ನೇಮಕಾತಿಯಲ್ಲಿ ಉತ್ತಮ ಶೈಕ್ಷಣಿಕ ಹಿನ್ನೆಲೆಯುಳ್ಳ ಅಭ್ಯರ್ಥಿಗಳು ಆಯ್ಕೆಗೊಳ್ಳುತ್ತಿದ್ದು, ಸದರಿಯವರಿಗೆ ತಾವು ಹೊಂದಿದ ಹುದ್ದೆಗೆ ಅನುಸಾರವಾಗಿ ಅವಶ್ಯ ವೃತ್ತಿಪರ ತರಬೇತಿಗಳನ್ನು ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸದರಿಯವರಿಗೆ ವೃತ್ತಿಪರ ಕೌಶಲ್ಯ ವೃದ್ಧಿಗಾಗಿ ಹಾಗೂ ಹೆಚ್ಚಿನ ವ್ಯಾಸಂಗಕ್ಕಾಗಿ ವೇತನರಹಿತ ವಿಶೇಷ ರಜೆ ಸೌಲಭ್ಯವನ್ನು ನೀಡುವ ಅವಶ್ಯಕತೆ ಕಂಡುಬಂದಿರುವುದಿಲ್ಲ. ಆದರಂತೆ, ನಿಗಮದ ಹಿತದೃಷ್ಟಿಯಿಂದ ನಿಗಮದ ನಿರ್ದೇಶಕ ಮಂಡಳಿಯು ಉಲ್ಲೇಖ-2ರಡಿ ನಮೂದಿಸಿರುವ ಠರಾವು ಸಂಖ್ಯೆ: 9798 ದಿನಾಂಕ: 12-04-2016 ರಲ್ಲಿ ವೇತನ ಹಾಗೂ ಭತ್ಯೆರಹಿತ ಅಸಾಧಾರಣ ರಜೆ ಬಗ್ಗೆ ಹೊರಡಿಸಿದ ಸುತ್ತೋಲೆ ಸಂಖ್ಯೆ: 1192 ದಿನಾಂಕ: 31-03-1999ನ್ನು ಹಿಂಪಡೆಯಲು ಅನುಮೋದನೆಯನ್ನು ನೀಡಿರುತ್ತದೆ. ಆದ್ದರಿಂದ, ಸುತ್ತೋಲೆ ಸಂಖ್ಯೆ: 1192 ದಿನಾಂಕ: 31-03-1999 ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ.

ಸಂಬಂಧಪಟ್ಟವರೆಲ್ಲರೂ ಮೇಲಿನ ತಿದ್ದುಪಡಿಗಳನ್ನು ಮನದಟ್ಟು ಮಾಡಿಕೊಂಡು ಅದರಂತೆ ಕ್ರಮ ಕೈಗೊಳ್ಳತಕ್ಕದ್ದು.

(ರಾಜೇಂದರ್ ಕುಮಾರ ಕಟಾರಿಯಾ)
ವ್ಯವಸ್ಥಾಪಕ ನಿರ್ದೇಶಕರು

... 2

**ಪ್ರತಿ ಮಾಹಿತಿಗಾಗಿ:**

1. ಅಧ್ಯಕ್ಷರು/ಉಪಾಧ್ಯಕ್ಷರು, ಕರಾರಸಾ ನಿಗಮ ರವರ ಆಪ್ತ ಕಾರ್ಯದರ್ಶಿಯವರಿಗೆ.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ/ವಾಕರಸಾಸಂಸ್ಥೆ/ಈಕರಸಾಸಂಸ್ಥೆ ರವರಿಗೆ.
3. ನಿರ್ದೇಶಕರು(ಸಿ:ಪ)/ ನಿರ್ದೇಶಕರು(ಭ:ಜಾ), ಕರಾರಸಾ ನಿಗಮ, ರವರಿಗೆ.

**ಪ್ರತಿ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:**

4. ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾ ನಿಗಮ ರವರುಗಳಿಗೆ.
5. ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ನೇಮಕ), ಕರಾರಸಾ ನಿಗಮ/ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಬೆಂಮಸಾ ಸಂಸ್ಥೆ/ವಾಕರಸಾ ಸಂಸ್ಥೆ/ಈಕರಸಾ ಸಂಸ್ಥೆ ರವರಿಗೆ.
6. ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ.
7. ಮುಖ್ಯ ಭದ್ರತಾ ಮತ್ತು ಜಾಗ್ರತಾಧಿಕಾರಿ, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ಕೇಂದ್ರ ಕಛೇರಿಯ ಸೂಚನಾ ಫಲಕದಲ್ಲಿ ಪ್ರದರ್ಶಿಸಿ, ಪ್ರದರ್ಶಿತಗೊಂಡ ಬಗ್ಗೆ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು (ಸಿಬ್ಬಂದಿ) ರವರಿಗೆ ವರದಿ ಸಲ್ಲಿಸುವುದು.
8. ಮುಖ್ಯ ಗಣಕ ವ್ಯವಸ್ಥಾಪಕರು, ಕರಾರಸಾ ನಿಗಮ, ಕೇಂದ್ರ ಕಛೇರಿ, ಬೆಂಗಳೂರು ರವರಿಗೆ ಸುತ್ತೋಲೆಯನ್ನು ನಿಗಮದ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
9. ಪ್ರಧಾನ ಕಛೇರಿ ಪತ್ರ ಕಡತ.